ನಮ್ಮ ಪ್ರತಿಭಟನೆ ಎರಡನೆಯದಾಗಿ ನ್ಯಾಯಾಂಗ ತನಿಖೆ ಆಗಬೇಕು ಎಂದು ಕೇಳಿದ್ದೇವೆ. ನಾವು ಅಧಿಕಾರದಲ್ಲಿ ಇದ್ದಾಗ ಆರು ವರ್ಷಗಳ ಕಾಲ ಎಷ್ಟೊಂದು ನ್ಯಾಯಾಂಗ ತನಿಖೆಗಳನ್ನು ನಾವು ಮಾಡಲಿಲ್ಲ. ಸದನ ಸಮಿತಿಯಲ್ಲಿ ನಮಗೆ ನಂಬಿಕೆ ಇದೆಯೋ ಇಲ್ಲವೋ ಆ ಪ್ರಶ್ನೆ ಅಲ್ಲ. ಸದನ ಸಮಿತಿಯನ್ನು ನಾವು ಕೇಳಿದ್ದೇವೆ. ಏತಕ್ಕೋಸ್ಕರ ಅಂದರೆ ಅಡ್‌ಮಿನಿಸ್ಟ್ರೇಟಿವ್ ಲ್ಯಾಪ್ಸಸ್ ಏನಾದರು ಆಗಿದೆಯೇ ಎಂದು ತಿಳಿಯಲು ಡೆಪ್ಯುಟಿ ಕಮಿಷನರ್‌ಗಳು ಎಮ್‌ಎಲ್‌ಗಳು ಹೇಳಿದ ಹಾಗೆ ಕೇಳಿದ್ದಿರಾ? ರಾಜಕೀಯ ಒತ್ತಡ ಹಾಕಿದ್ದೀರಾ ಇಲ್ಲವೂ ಅನ್ನುವುದನ್ನು ತಿಳಿಯುವುದಕ್ಕೆ ನಾವು ಸದನ ಸಮಿತಿಯನ್ನು ಕೇಳಿದ್ದೇವೆ. ನ್ಯಾಯಾಂಗ ತನಿಖೆ ಕೇಳಿರುವುದು ಪೋಲೀಸ್ ಎಕ್ಸಸ್ ಆಗಿದೆಯೋ ಇಲ್ಲವೋ ಅಂತ ನೋಡಲು ಒಂದು ವರ್ಷ ಪೋಲೀಸ್ ಎಕ್ಸಸ್ ಆಗಿಲ್ಲ ಅನ್ನುವುದಾದರೆ ನೀವು ಎರಡು ತಿಂಗಳು ಟೈಮ್ ಕೊಡಿ, ಜ್ಯುಡಿಷಿಯಲ್ ಪ್ರೋಬ್‌ಗೆ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನು ನೀವು ಅಪಾಯಿಂಟ್ ಮಾಡಿ ಎರಡು ತಿಂಗಳ ಒಳಗೆ ಅವರು ರಿಪೋರ್ಟ್ ಕೊಡಲಿ. ಅದರಲ್ಲಿ ನಿಮ್ಮ ಸರ್ಕಾರಕ್ಕೆ ಅಥವಾ ಪೋಲಿಸಿನವರಿಗೆ ಶಹಬಾಸ್‌ಗಿರಿ ಕೊಟ್ಟರೆ ನಿಮಗೆ ರಾಜಕೀಯವಾಗಿ ಅನುಕೂಲವಾಗುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಜನತಾ ದಳದ ಸದಸ್ಯರು ಏನೋ ಪ್ರಿಸ್ಟೀಜ್ ಪಾಯಿಂಟ್ ಮಾಡಿಕೊಂಡು ಹೊರಗಡೆ ಇದ್ದಾರೆ ಎನ್ನತಕ್ಕಂತಹ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಇವತ್ತು ಈ ಕಡೆ ಯಾರ್ಯಾರು ನಮಗೆ ತತ್ವ ಬೋಧನೆ ಮಾಡುವುದಕ್ಕೆ ಬಂದಿದ್ದಾರೆ ಅವರು ಇದನ್ನು ಮಾಡಿದ್ದಾರೆ. ಈಗ ಅವರಿಗೆ ಅನುಕೂಲ ಆಗುವುದಿಲ್ಲ ಎಂದು ಹೇಳಿ ಈ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಶ್ರೀಮತಿ ಮೋಟಮ್ಮ

(ವಿರೋಧ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ ಕುಳಿತು ಧರಣಿ ನಡೆಸಿದರು ಮತ್ತು ನ್ಯಾಯಾಂಗ ತನಿಖೆ ಆಗಲೇಬೇಕೆಂದು ಘೋಷಣೆಗಳನ್ನು ಕೂಗಿದರು)

ಶ್ರೀಮತಿ ಮೋಟಮ್ಮ: ಅಧ್ಯಕ್ಷರೇ, ನಾನು 610 ನೇ ಪ್ರಶ್ನೆಯನ್ನು ಕೇಳುತ್ತೇನೆ.

(ಈ ಸಮಯದಲ್ಲಿ ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿ ಕುಳಿತು ಧರಣಿ ನಡೆಸುತ್ತಾ ಸಭೆಯ ಕಾರ್ಯಕಲಾಪಗಳಿಗೆ ಅಡಚಣೆ ಉಂಟು ಮಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಸಲಹೆ ಕೊಟ್ಟೆ, ಏನೆಂದರೆ, ಸಭೆಯನ್ನು 10 ನಿಮಿಷ ಮುಂದೂಡಿ ಎಂದು ಹೇಳಿದೆ, ನನ್ನ ಸಲಹೆ ಇಲ್ಲಿ ಏನೂ ಗೌರವ ಬರಲಿಲ್ಲ. ಮತ್ತು ಅಮಾನತ್ತಿನಲ್ಲಿರುವವರನ್ನು ಒಂದು ನಿರ್ಣಯ ಮಾಡಿ ಮತ್ತೆ ಶಾಸನ ಸಭೆಗೆ ಕರೆಯುವ ವಾತಾವರಣ ನಿರ್ಮಾಣ ಮಾಡಿ ಎಂದು ಹೇಳಿದೆ, ಅದಕ್ಕೂ ಸಹ ಗೌರವ ಬರಲಿಲ್ಲ. ಆದರೂ ನೀವು ಪ್ರಶ್ನೋತ್ತರ ಕಾಲ ಪ್ರಾರಂಭಗೊಳಿಸುವುದಾದರೆ ನನಗೆ ಬಹಳ ಮನಸ್ಸಿಗೆ ನೋವು ಆಗುತ್ತಿದೆ. ಈ ವಾತಾವರಣದಲ್ಲಿ ನಾನು ಇಲ್ಲಿ ಇರುವ ಬದಲು ಸಭಾತ್ಯಾಗ ಮಾಡುವುದು ಒಳ್ಳೆಯದು ಎಂದು ನಾನು ತಮಗೆ ಕೈ ಮುಗಿದು ಹೋಗುತ್ತಿದ್ದೇನೆ.

ಶ್ರೀ ಎಸ್.ಎಮ್. ಕೃಷ್ಣ: ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಸರ್ಕಾರವನ್ನು ತಪ್ಪಿಗೆ ಸಿಕ್ಕಿಸಬಾರದು ಅಂದರು. ನಾವು ಮಾನ್ಯ ವಿರೋಧ ಪಕ್ಷದ ಸದಸ್ಯರನ್ನು ಅಧ್ಯಕ್ಷರ ಕೊಠಡಿಗೆ ಕರೆಸುವುದಕ್ಕೆ ಅಧ್ಯಕ್ಷರೇ ಒಪ್ಪುವುದಾದರೆ ಕರೆದು ಮಾತನಾಡುವುದಕ್ಕೆ ನಾವು ಸಿದ್ಧ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾವಾಗಿ ಹೊರಗಡೆ ಹಾಕಲಿಲ್ಲ, ನೀವು ಬಲವಂತದಿಂದ ಆ ಪ್ರಸಂಗವನ್ನು ಹುಟ್ಟಿಸಿಕೊಂಡು ಹಾಕಿಸಿಕೊಂಡಿದ್ದೀರಿ. ಮಾನ್ಯ